# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 542 |
| ಮಾನ್ಯ ಸದಸ್ಯರ ಹೆಸರು | ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 11.12.2025 |

<table>
<tr><th>ಕ್ರ.<br>ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಕಳೆದ 2 ವರ್ಷಗಳಲ್ಲಿ ಅಬಕಾರಿ ಇಲಾಖೆಯು ಎಷ್ಟು ಪ್ರಮಾಣದ ಆದಾಯವನ್ನು ಗಳಿಕೆ ಮಾಡಿರುತ್ತದೆ;</td><td>ಕಳೆದ ಎರಡು ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಸಂಗ್ರಹಿಸಿದ ಅಬಕಾರಿ ರಾಜಸ್ವ ವಿವರಗಳು ಕೆಳಕಂಡಂತಿದೆ.<br>(ರೂ. ಕೋಟಿಗಳಲ್ಲಿ)<table><tr><th>ಕ್ರ.ಸಂ</th><th>ವರ್ಷ</th><th>ರಾಜಸ್ವ</th></tr><tr><td>01</td><td>2023-24</td><td>34,628.98</td></tr><tr><td>02</td><td>2024-25</td><td>35,783.54</td></tr></table></td></tr>
<tr><td>ಆ.</td><td>ಸದರಿ ಇಲಾಖೆಯಲ್ಲಿ ಕರ್ತವ್ಯ ಲೋಪ ಎಸಗುವ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ದೂರುಗಳು ಬಂದಿವೆಯೇ; ಬಂದಿದ್ದಲ್ಲಿ, ಅಂತವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲಾಗಿದೆಯೇ;</td><td>ಅಬಕಾರಿ ಇಲಾಖೆಯಲ್ಲಿ ಕರ್ತವ್ಯ ಲೋಪ ಎಸಗುವ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಶಿಸ್ತು ಪ್ರಕರಣ ದಾಖಲಿಸಿ ಸೂಕ್ತ ಕ್ರಮ ಜರುಗಿಸಲಾಗುತ್ತಿದೆ. ಒಟ್ಟು 152 ಪ್ರಕರಣಗಳು ಚಾಲ್ತಿಯಲ್ಲಿರುತ್ತವೆ.</td></tr>
</table>

| | | |
|---|---|---|
| ಇ. | ಇಲಾಖೆಯಲ್ಲಿ ಎಷ್ಟು ವರ್ಷಗಳಿಗೊಮ್ಮೆ ಪರವಾನಗಿ ನವೀಕರಣ ಮಾಡಲಾಗುವುದು; ಪರವಾನಗಿ ನೀಡಲು ಅನುಸರಿಸುವ ನಿಯಮಗಳೇನು; | ದಿನಾಂಕ:23-06-2025ರಲ್ಲಿ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1968ರ ನಿಯಮ 7ಕ್ಕೆ ತಿದ್ದುಪಡಿ ತರಲಾಗಿದ್ದು, ಸದರಿ ತಿದ್ದುಪಡಿಯನ್ವಯ ಪ್ರತಿ ವರ್ಷ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ಪಾವತಿಗೆ ಒಳಪಟ್ಟು, ಮಂಜೂರಾತಿ ಅಥವಾ ನೀಡಲಾದ ಸನ್ನದುಗಳು 05 ಅಬಕಾರಿ ವರ್ಷಗಳ ಅವಧಿಗೆ ಮಾನ್ಯವಾಗಿರುತ್ತವೆ.<br><br>ಪರವಾನಗಿ ನೀಡಲು ಅನುಸರಿಸುವ ಮಾನದಂಡಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಈ. | ಹೊಸದಾಗಿ ಮದ್ಯದ ಅಂಗಡಿಗಳಿಗೆ ಪರವಾನಗಿಗಳನ್ನು ನೀಡಲಾಗಿದೆಯೇ; ಇಲ್ಲವಾದಲ್ಲಿ ನಿಷ್ಕ್ರಿಯವಾಗಿರುವ ಪರವಾನಗಿಗಳನ್ನು ಮರು ಹರಾಜು ಮೂಲಕ ನೀಡಲು ನಿಯಮಗಳಿಗೆ ತಿದ್ದುಪಡಿ ತರಲಾಗಿದೆಯೇ; ಇಲ್ಲಾವಾದಲ್ಲಿ ಯಾವ ಕಾಲಮಿತಿಯಲ್ಲಿ ತರಲಾಗುವುದು? | ರಾಜ್ಯದಲ್ಲಿ ಸಿಎಲ್-4, ಸಿಎಲ್-6, ಸಿಎಲ್-6ಎ, ಸಿಎಲ್-7, ಹೊಂದಿಕೊಂಡಂತೆ ಆರ್.ವಿ.ಬಿ, ವೈನ್ ಟ್ಯಾವರ್ನ್, ವೈನ್ ಬೊಟೀಕ್ ಮತ್ತು ಮೈಕ್ರೋಬ್ರೀವರಿ ಸನ್ನದುಗಳನ್ನು ಮಂಜೂರು ಮಾಡಲಾಗುತ್ತಿದೆ.<br><br>ಸ್ಥಗಿತಗೊಂಡ ಸಿಎಲ್-2 ಸನ್ನದುಗಳು, 1987 ರ ಕೋಟಾ (ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 452 ಇಎಫ್‌ಎಲ್ 86, ದಿನಾಂಕ:30.06.1987 ರಂತೆ) ಪ್ರಕಾರ ಇನ್ನೂ ಮಂಜೂರು ಮಾಡಬೇಕಾದ ಸಿಎಲ್-2 ಸನ್ನದುಗಳು, ಸ್ಥಗಿತಗೊಂಡ ಸಿಎಲ್-11(ಸಿ) ಸನ್ನದುಗಳು, ಅಬಕಾರಿ ಆಯುಕ್ತರಿಂದ ಪೂರ್ವಾನುಮೋದನೆ ಪಡೆದ ಆದರೆ ಇನ್ನೂ ತೆರೆಯದ ಸಿಎಲ್-11 (ಸಿ) ಸನ್ನದುಗಳು ಮತ್ತು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (M.S.I.L) ಗೆ ಕ್ರಮವಾಗಿ ಸರ್ಕಾರದ ಆದೇಶ ಸಂಖ್ಯೆ: FD 07 EFL 2008, ದಿನಾಂಕ: 03-07-2009 ಮತ್ತು ಸರ್ಕಾರದ ಆದೇಶ ಸಂಖ್ಯೆ: FD 15 EFL 2015, ದಿನಾಂಕ: 23-09-2016 ರನ್ವಯ ಹಂಚಿಕೆಯ ಮಾಡಿರುವ ಪ್ರಕಾರ ಇನ್ನೂ ಮಂಜೂರು ಮಾಡಬೇಕಾದ ಸಿಎಲ್-11(ಸಿ) ಸನ್ನದುಗಳನ್ನು ಹಾಗೂ ಸ್ಥಗಿತಗೊಂಡ ಸಿಎಲ್-9 ಸನ್ನದುಗಳನ್ನು ಇ-ಹರಾಜು ಮೂಲಕ ನೀಡಲು ಕೆಳಕಂಡಂತೆ ತಿದ್ದುಪಡಿ ತರಲಾಗಿರುತ್ತದೆ.<br><br>1. ಅಧಿಸೂಚನೆ-I: ಆಇ/7/ಪಿಇಎಸ್/2025, ದಿನಾಂಕ: 03.11.2025 ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967. |

| | | |
|---|---|---|
| | | 2. ಅಧಿಸೂಚನೆ-II: ಆಇ/7/ಪಿಇಎಸ್/2025, ದಿನಾಂಕ:03.11.2025 ಕರ್ನಾಟಕ ಅಬಕಾರಿ ಕರ್ನಾಟಕ ಅಬಕಾರಿ (ಬಿಯರ್‌ನ ಚಿಲ್ಲರೆ ಮಾರಾಟದ ಹಕ್ಕಿನ ಗುತ್ತಿಗೆ) ನಿಯಮಗಳು, 1976<br>3. ಅಧಿಸೂಚನೆ-III: ಆಇ/7/ಪಿಇಎಸ್/2025, ದಿನಾಂಕ:03.11.2025 ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳು, 1976 |

ಆಇ 92 ಇಎಲ್‌ಕ್ಯೂ 2025

(ಆರ್.ಬಿ.ತಿಮ್ಮಾಪುರ)
**ಅಬಕಾರಿ ಸಚಿವರು**

## ಅನುಬಂಧ

**ಶಿಸ್ತು ವಿಭಾಗದಲ್ಲಿ ಬಾಕಿ ಇರುವ ಕಡತಗಳ ಅಂಕಿ ಅಂಶಗಳ ವಿವರ ( As on dt. 04-12-2025).**

| ಕ್ರ. ಸಂ. | ವಿಭಾಗ. | ಇಲಾಖಾ ಹಂತ | ಸರ್ಕಾರದ ಹಂತ | ಲೋಕಾಯುಕ್ತ ಹಂತ | ಒಟ್ಟು |
|---|---|---|---|---|---|
| 01. | ಬೆಂಗಳೂರು(ಉತ್ತರ) | 05 | 01 | 08 | **14** |
| 02. | ಬೆಂಗಳೂರು(ದಕ್ಷಿಣ) | 05 | 0 | 13 | **18** |
| 03. | ಬೆಂಗಳೂರು(ಗ್ರಾಮಾಂತರ) | 08 | 02 | 05 | **15** |
| 04. | ಮಂಗಳೂರು. | 11 | 0 | 06 | **17** |
| 05. | ಮೈಸೂರು. | 15 | 02 | 07 | **24** |
| 06. | ಬೆಳಗಾವಿ. | 07 | 02 | 04 | **13** |
| 07. | ದಾವಣಗೆರೆ. | 06 | 01 | 03 | **10** |
| 08. | ಹೊಸಪೇಟೆ. | 08 | 06 | 02 | **16** |
| 09. | ಕಲಬುರಗಿ. | 15 | 02 | 08 | **25** |
| | **ಒಟ್ಟು:** | **80** | **16** | **56** | **152** |

ಆಇ 92 ಇಎಲ್‌ಕ್ಯೂ 2025